ಶ್ರೀ ಜಿ. ವಿ. ಆಂಜನಪ್ಪ.—ಮಾನ್ಯ ಶ್ರೀ ಶಾಸ್ತ್ರಿಗಳು ಹೇಳಿದ ವಿಚಾರವಾಗಿ ನಾನು ಹೇಳುವುದಾದರೆ, ಇಂಗ್ಲೆಂಡ್ ಕಾಮನ್‌ವೆಲ್ತ್ ಪಾರ್ಲಿಮೆಂಟಿನಲ್ಲಿರುವ ಪಕ್ಷದವರು ಉಪಚುನಾವಣೆ ನಡೆಸುವಾಗ ಅಲ್ಲಿಯ ಪದ್ಧತಿ ಏನಿದೆಯೆಂಬುದನ್ನು ಇವರು ತಿಳಿಯಬೇಕು. ಅಲ್ಲಿ ಸಾರ್ವತ್ರಿಕ ಚುನಾವಣೆ ಬಂದಾಗ್ಗೆ ಒಂದು ತಿಂಗಳ ಮುಂಚೆಯೇ ಅಲ್ಲಿನ ಸರ್ಕಾರ ರಾಜೀನಾಮೆ ಕೊಡಬೇಕೆಂದಿದೆ. ಅದು ಸರ್ಕಾರದ ಗಮನಕ್ಕೆ ಬಂದಿದೆಯೇ ?

(ಉತ್ತರವಿಲ್ಲ)

Sri M. C. NARASIMHAN.—Has it come to the notice of the Government that in a recent case the Supreme Court has made observations that just prior to elections or round about during the elections, no expenditure should be incurred on the constituency as that would mean trying to influence the voters in a particular way ?

Sri B. D. JATTI.—It does not involve any expenditure of the Government.

Sri M. C. NARASIMHAN.—So far a Tiptur bye-election is concerned, was there any expenditure incurred prior to the election or even during the election on the constituency by the departments of Government ?

Sri B. D. JATTI.—If departmental works are to be taken up they are continuously being done. They are not stopped during election or bye-election time.

ಶ್ರೀ ಎಂ. ವಿ. ವೆಂಕಟಪ್ಪ.—ಮಂಡ್ಯಾ ಲೋಕಸಭಾ ಉಪಚುನಾವಣೆಗೆ ಕೇಂದ್ರದಿಂದ ಒಬ್ಬ ಉಪಮಂತ್ರಿಗಳು ಖಾಸಗಿಯಾಗಿ ಬಂದಿದ್ದರೋ ಅಥವಾ ಸರ್ಕಾರದ ಪರವಾಗಿ ಬಂದಿದ್ದರೋ ?

Mr. DEPUTY CHAIRMAN.—That need not be replied.

Sainik School in Bidar District

9. Sri S. G. KHELGI (Local Authorities' Constituency).—

Will the Minister for Education be pleased to state :—

(*a*) whether Government have received any representation to open Sainik School in Bidar District;

(*b*) if so, whether Government assure to open the School at Bidar District.

A.—Sri K. V. SHANKARA GOWDA (Minister for Education).—

(*a*) No.

(*b*) No.

ಶ್ರೀ ಎಸ್. ಜಿ. ಖೆಲ್ಗಿ.—(ಅ) ಪ್ರಶ್ನೆಗೆ ಉತ್ತರವಾಗಿ ಮನವಿಗಳು ಬಂದಿಲ್ಲವೆಂದು ಹೇಳಿದೆ. ನಾನೇ ಮಂತ್ರಿಗಳಿಗೆ ಒಂದು ಕಾಗದ ಬರೆದಿದ್ದಕ್ಕೆ ಉತ್ತರ ಬಂದಿದೆ. ಈಗ ಆ ಉತ್ತರ ಸರಿಯೋ ಅಥವಾ ಈ ಉತ್ತರ ಸರಿಯೋ ?

ಶ್ರೀ ಕೆ. ವಿ. ಶಂಕರಗೌಡ.—ಅದೇನು ಇರಬಹುದೆಂಬುದನ್ನು ವಿಚಾರಮಾಡುತ್ತೇನೆ.

ಶ್ರೀ ಎಸ್. ಜಿ. ಖೆಲ್ಲಿ.—ನನಗೆ ಉತ್ತರದಲ್ಲಿ ಅದನ್ನು ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದೆ. ನಮ್ಮ ಜಿಲ್ಲೆಯ ಕೆಲವು ಜನರು ನಿರುದ್ಯೋಗ ನಿವಾರಣೆಗಾಗಿ ಮತ್ತು ಅವರ ಒಂದು ಆರ್ಥಿಕ ದೃಷ್ಟಿಯಿಂದ ಅಲ್ಲಿ ಸೈನಿಕಶಾಲೆ ಬೇಕು ಎಂಬುದಾಗಿ ಅಲ್ಲಿನ ಜನರು ಪದೇ ಪದೇ ಕೇಳುತ್ತಿದ್ದಾರೆಂಬುದು ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಕೆ. ವಿ. ಶಂಕರಗೌಡ.—ಬಿಜಾಪುರದಲ್ಲಿ ಟ್ರೈನಿಂಗ್ ಸ್ಕೂಲ್ ಒಂದಿದೆ. ಅಲ್ಲಿ 500 ಜನ ವಿದ್ಯಾರ್ಥಿಗಳಿಗೆ ಪ್ರವೇಶ ಅವಕಾಶವಿದೆ. ಆದರೂ ಅಲ್ಲಿ ಅಷ್ಟು ಜನರಿಲ್ಲ. ಮುನ್ನೂರು ಹತ್ತಿರತ್ತಿರದವರೆಗೂ ಬಾರದಿದ್ದರೆ ಏನು ಪ್ರಯೋಜನ ? ಅಲ್ಲಗೇ ಎಷ್ಟು ವಿದ್ಯಾರ್ಥಿಗಳು ಬೇಕೋ ಅಷ್ಟು ಜನ ಬಂದಿಲ್ಲ. ಅದರ ಜೊತೆಗೆ ಕೊಡಗಿನ ಹತ್ತಿರ ಕುಶಾಲನಗರದಲ್ಲಿ ಒಂದು ಸೈನಿಕ ಶಾಲೆಯನ್ನು ಮಾಡಿಕೊಂಡಿದ್ದಾರೆ. ಮುಂದೆ ಬಿದರೆ ಜಿಲ್ಲೆಗೂ ಸೈನಿಕ ಶಾಲೆಯನ್ನು ಕೊಡುವ ಯೋಚನೆ ಮಾಡುತ್ತೇವೆ.

Sri M. P. L. SASTRY.—Is there any idea of having the Sainik Schools in old Mysore area at all Sir ? Has the Government considered this very seriously ?

Sri K. V. SHANKARA GOWDA.—I do not make any difference between the new Mysore and old Mysore State, Wherever facilities are available and good response is forthcoming, it will be done.

Sri M. P. L. SASTRY.—Wherever no facilities are available, they are not considered. Does it mean to say that they should not have any Sainik Schools ?

Sri K. V. SHANKARA GOWDA.—I do not mean to say that there are no facilities in old Mysore area. We have already started one at Bijapur which has a stren th of 500 students. We are not having sufficent number to start new schools. I think these schools will be sufficient and there will be no necessity to open further schools.

ಶ್ರೀ ಜೆ. ಬಿ. ಮರ್ಲಾರಾಧ್ಯ.—ಪ್ರವೇಶಾವಕಾಶಗಳ ಆಧಾರದ ಮೇಲೆ ಸೈನಿಕಶಾಲೆಗಳನ್ನು ತೆರೆಯುತ್ತೀರಾ ? ಬಿಜಾಪುರದಲ್ಲಿರತಕ್ಕ ಸೈನಿಕ ಶಾಲೆಯಲ್ಲಿ 500 ಜನಗಳಿಗೆ ಅವಕಾಶವಿದ್ದರೂ ಕೊಡಗಿನಲ್ಲಿ ಬೇರೆ ಏತಕ್ಕೋಸ್ಕರ ಒಂದು ಸೈನಿಕಶಾಲೆಯನ್ನು ತೆರೆಯಲು ಪ್ರಯತ್ನಮಾಡಿದ್ದೀರಿ ?

ಶ್ರೀ ಕೆ. ವಿ. ಶಂಕರಗೌಡ.—ಕೊಡಗಿನಲ್ಲಿ ಸಾಧಾರಣವಾಗಿ ಸೈನಿಕಶಾಲೆಗಳಿಗೆ ಸೇರುವ ಜನಗಳು ಹಾಗೂ ವಿದ್ಯಾರ್ಥಿಗಳು ಹೆಚ್ಚಿಗೆ ಬರುತ್ತಾರೆಂದು ಅಲ್ಲಿಯೂ ಒಂದು ಸೈನಿಕಶಾಲೆಯನ್ನು ಮಾಡಿದ್ದೇವೆ.

ಶ್ರೀ ಎಂ. ಪಿ. ಎಲ್. ಶಾಸ್ತ್ರಿ.—ಕೊಡಗಿನಲ್ಲಿ ಹೆಚ್ಚು ಜನ ಈ ಶಾಲೆಗೆ ಸೇರುವುದರಿಂದ ಈ ಸಂಸ್ಥಾನಕ್ಕೆ ಅವರ ಪೈಕಿ ಬಹಳ ಜನ ಅಧಿಕಾರಿಗಳಾಗಿ ಸೇವೆ ಮಾಡಿದ್ದಾರೆಂಬುದನ್ನು ರಿಕಾರ್ಡ್‌ನಿಂದ ತಿಳಿಯಬಹುದು. ಆದ್ದರಿಂದ ಕೊಡಗಿನಿಂದಲೇ ಹೆಚ್ಚು ಜನ ಸೈನಿಕಶಾಲೆಗೆ ಸೇರುವುದಕ್ಕೆ ಬರುತ್ತಾರೆಂದು ಕೇವಲ ಹಿಂದಿನ ಒಂದು ಅನುಭವದ ಮೇಲೆ ಹೇಳುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಪ್ರವೇಶಾವಕಾಶದ ಒಂದು ಆಧಾರದ ಮೇಲೆ ದಯವಿಟ್ಟು ಈ ಶಾಲೆಗಳನ್ನು ತೆರೆಯುತ್ತೀರಾ? ಜಿಲ್ಲಾವಾರು ಇವನ್ನು ತೆರೆಯುವುದರಿಂದ ಈ ಸೈನಿಕಶಾಲೆಗಳ ಮಹತ್ತರವಾದ ಉದ್ದೇಶವಾದರೂ ಏನು ?

ಶ್ರೀ ಕೆ. ವಿ. ಶಂಕರಗೌಡ.—ಜಿಲ್ಲಾವಾರು ಅವನ್ನು ತೆಗೆಯುವುದಿಲ್ಲ. ಪ್ರವೇಶಾವಕಾಶನೋಡಿಕೊಂಡು ತೆರೆಯುತ್ತೇವೆ. ಎಲ್ಲಿ ಅವನ್ನು ತೆರೆದರೆ ಹೆಚ್ಚಿಗೆ ವಿದ್ಯಾರ್ಥಿಗಳನ್ನು ಆಕರ್ಷಿಸಬಹುದೆಂಬುದನ್ನು ಪರಿಶೀಲನೆಮಾಡಿ ನೋಡುತ್ತಿದ್ದೇವೆ.

Sri M. P. L. SASTRY.—To attract large number of students and young men for this kind of disciplined training available at Sainik School of the Maidan area in the old Mysore, and to facilitate the people, would Government consider the desirability and possibility of starting new Sinik Schools in this area ?

Sri K. V. SHANKARA GOWDA.—This is a very costly affair. The cost involved will have to be taken into consideration. We have already opened two Sainik Schools. If some more schools are necessary then only the question of allocating them in a particular area will arise. That question will be considered when necessity arises for opening more schools.

Sri M. R. LAKSHAMMA.—Has the Government examined that there is a very poor response for the Sainik School at Bijapur and what are the measures they propose to take in the coming year to remedy this ?

Sri K. V. SHANKARA GOWDA.—The reason is obvious. Many of the young boys are not willing to go to the Sainik School at Bijapur.

Smt. M. R. LAKSHAMMA.—What steps Government propose to take to increase the number ?

Sri K. V. SHANKARA GOWDA.—It has been recently opened. It takes some more time to get the required additional strength.

ಶ್ರೀ ಜೆ. ಬಿ. ಮರ್ಲಾರಾಧ್ಯ.—ಈಗ ನಕಾರ್ದವರು ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿ ಎನ್.ಸಿ.ಸಿ. ಯನ್ನು ಜಾರಿಗೆ ತಂದರು. ಹತ್ತಾರು ವರ್ಷಗಳಾದ ಮೇಲೆ ಅವರಿಂದ ನಿರೀಕ್ಷಿಸಿದಷ್ಟು ಪ್ರಯೋಜನ ಲಭ್ಯವಾಗಲಲ್ಲವೆಂಬ ಆಧಾರದ ಮೇಲೆ ಅದನ್ನು ಐಚ್ಛಿಕವಾಗಿ ಮಾಡೋಣವೆಂದು ನಿರ್ಧಾರಕ್ಕೆ ಬಂದಿರುವ ಹಾಗೆ ಇದೆ. ಆಂಧ್ರ ಯೂನಿವರ್ಸಿಟಿಯವರು ಮತ್ತು ಇತರ ಕಡೆಗಳಲ್ಲಿ ಅದೇ ರೀತಿಯಾಗಿ ನಿರ್ಧಾರ ಮಾಡಿದ್ದಾರೆ. ಈ ಸೈನಿಕ ಶಾಲೆಗಳ ನಿರ್ಧಾರ ಥೋರಣಿ ಏನು ಎಂಬುದನ್ನು ಪ್ರಚಾರ ಮಾಡುವುದಕ್ಕೆ ಪ್ರಯತ್ನ ಮಾಡಿದರೆ ಮೈಸೂರು ನಕಾರ್ದವರು ಎಷ್ಟು ಕೊಡುತ್ತಾರೆ. ಹಾಗೆಯೇ ಕೇಂದ್ರ ನಕಾರ್ದವರು ಒಂದು ಶಾಲೆಗೆ ಎಷ್ಟು ಕೊಡುತ್ತಾರೆ ?

ಶ್ರೀ ಕೆ. ವಿ. ಶಂಕರಗೌಡ.—ಇಂಡಿಯಾ ನಕಾರ್ದವರು ಅರ್ಧ ಕೊಡುತ್ತಾರೆ, ಮೈಸೂರು ನಕಾರ್ದವರು ಅರ್ಧ ಕೊಡುತ್ತಾರೆ.

ಶ್ರೀ ಜೆ. ಬಿ. ಮರ್ಲಾರಾಧ್ಯ.—ಒಂದು ಸೈನಿಕಶಾಲೆಗೆ ವರ್ಷಕ್ಕೆ ವರ್ಷಕ್ಕೆ ಎಷ್ಟು ದುಡ್ಡು ಖರ್ಚಾಗುತ್ತದೆ ?

Sri K. V. SHANKARA GOWDA.—That information is not available with me.

ಶ್ರೀ ಎಂ. ಸಿ. ನರಸಿಂಹನ್.—ಇದನ್ನು ಪ್ರೈವೇಟ್ ಸೆಕ್ಟರ್‌ಗೆ ಬಿಡುವ ಯೋಚನೆ ಏನಾದರೂ ಇದೆಯೇ ?

(ಉತ್ತರವಿಲ್ಲ)

Sri M. P. L. SASTRY.—Has the Government considered the desirability in view of the fact, that we have a very great part in history that women also should get trained in this disciplined training. Is Government having any idea of opening a Sainik School in Mysore for Girls ?

Sri K. V. SHANKARA GOWDA.—Time is not yet ripe for that Sir.

ಶ್ರೀ ಪೈ. ಎನ್. ಪಾಟೀಲ್.—ಒಂದು ವೇಳೆ ಬಿಜಾಪುರ ಸೈನಿಕ ಶಾಲೆ ವಿಫಲವಾದರೆ ಕಂಪಲ್ಸರಿಯಾಗಿ ಅಲ್ಲಿ ಮಿಲಿಟರಿ ಟ್ರೈನಿಂಗ್ ಸ್ಕೂಲ್ ಕೊಡುವ ಯೋಚನೆ ಸರ್ಕಾರಕ್ಕಿನೆಯೇ ?

ಶ್ರೀ ಕೆ. ವಿ. ಶಂಕರಗೌಡ.—ಕಂಪಲ್ಸರಿಯಾಗಿ ಮಿಲಿಟರಿ ಟ್ರೈನಿಂಗ್ ಸ್ಕೂಲ್ ಕೊಡುವ ಸ್ಥಿತಿಗೆ ನಾವು ಇನ್ನೂ ಬಂದಿಲ್ಲ.

Smt. M. R. LAKSHAMMA.—Is it a residential one ?

Sri K. V. SHANKARA GOWDA.—Yes, Sir.

Smt. M. R. LAKSHAMMA.—If it is so, why not the Physical Instructors try to propogate ? I feel the proposition of the Sainik School has not been properly propogated. Why not the Physical Instructors be asked to find out which are the best boys who could be sent to Sainik Schools ?

Sri K. V. SHANKARA GOWDA.—That is a good suggestion and it will be examined.

Members' Representations

ಶ್ರೀ ಎ. ವೆಂಕಟಪ್ಪ (ವಿಧಾನಸಭಾ ಕ್ಷೇತ್ರ).—ಈಚೆಗೆ ಈ ಅಧಿವೇಶನದಲ್ಲಿ ನಾನೆತ್ತಿದು ದಿವಸಗಳಿಂದ ಈ ಸಭೆಯಲ್ಲಿ ಪ್ರಶ್ನೋತ್ತರಗಳು 15-20 ನಿಮಿಷಗಳಲ್ಲೇ ಮುಗಿದುಹೋಗುತ್ತವೆ. ನಾನು ಒಂದು ಪ್ರಶ್ನೆಯನ್ನು ಕಳುಹಿಸಿ 15 ದಿವಸಗಳಾದುವು. ಅದಕ್ಕೆ ಇನ್ನೂ ಉತ್ತರ ಬರಲಿಲ್ಲ. ಈ ಅಧಿವೇಶನ ಮುಗಿಯುವ ಕೊನೆಯ ದಿವಸಗಳಲ್ಲಿ ಒಂದು ದಿವಸಕ್ಕೆ 10-15 ಪ್ರಶ್ನೆಗಳು ಬರುವುದರಿಂದ ನಾವು ನಮ್ಮ ಪ್ರಶ್ನೆಗಳ ಪೇಲೆ ಸರಿಯಾಗಿ ಸಪ್ಲಿಮೆಂಟರಿ ಪ್ರಶ್ನೆಗಳನ್ನು ಕೇಳುವುದಕ್ಕೆ ಅವಕಾಶವಿರುವುದಿಲ್ಲ. ಅದಕ್ಕೋಸ್ಕರ ಸರ್ಕಾರದವರಿಗೆ ತಿಳಿಸಿ ಆದಷ್ಟು ಜಾಗ್ರತೆ ಪ್ರಶ್ನೆಗಳಿಗೆ ಉತ್ತರಗಳನ್ನು ತರಿಸಬೇಕೆಂದು ನಾನು ಸಭಾಪತಿಯವರನ್ನು ಪ್ರಾರ್ಥಿಸಿಕೊಳ್ಳುತ್ತೇನೆ. ಏತಕ್ಕೆಂದರೆ ವಿಷಯಗಳು ಬಿಸಿ ಬಿಸಿಯಾಗಿದ್ದಾಗ ಪ್ರಶ್ನೆಗಳನ್ನು ಕೇಳಿದರೆ ಬಿಸಿ ಬಿಸಿಯಾಗಿರುತ್ತದೆ. ಈಗ ಭಾಷಾ ಪ್ರಶ್ನೆ ಇದೆ. ಅದಕ್ಕೆ ಸಂಬಂಧಪಟ್ಟ ಪ್ರಶ್ನೆಯನ್ನು ಈ ಸಮಯದಲ್ಲಿ ಕೇಳಿದರೆ ಬಿಸಿ ಬಿಸಿಯಾಗಿರುತ್ತದೆ. ಬಿಸಿ ಬೇಳೆ ಬಾತನ್ನು ಬಿಸಿಯಾಗಿರುವಾಗ ತಿಂದರೆ ಚೆನ್ನಾಗಿರುತ್ತದೆಯೇ ವಿನಾ ಅದನ್ನು ಆರಿದಮೇಲೆ ತಿಂದರೆ ಚೆನ್ನಾಗಿರುವುದಿಲ್ಲ. ಆದ್ದರಿಂದ ಆದಷ್ಟು ಬೇಗನೆ ಪ್ರಶ್ನೆಗಳಿಗೆ ಉತ್ತರಗಳನ್ನು ತರಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಸಭಾಪತಿಯವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ (ವಿಧಾನಸಭಾ ಕ್ಷೇತ್ರ).—ಸ್ವಾಮಿ, ಸತ್ರಿಕೆಯಲ್ಲಿ ಪ್ರಕಟವಾಗಿರುವ ರೀತಿಯಲ್ಲಿ ಭಾಷಾ ಸಮಸ್ಯೆಯ ವಿಚಾರದಲ್ಲಿ ಮಾನ್ಯ ಲೀಡರ್ ಅವರು ಹೇಳಿದ್ದಾರೆ, ಮಾನ್ಯ ವಿದ್ಯಾಮಂತ್ರಿಗಳು ಅತಿಶೀಘ್ರವಾಗಿ ಸರ್ಕಾರದ ಪರವಾಗಿ ಒಂದು ನಿರ್ಣಯವನ್ನು ಉಭಯ ಸದನಗಳಲ್ಲೂ ಮಂಡನೆ ಮಾಡುತ್ತಾರೆಂದು. ಎಷ್ಟು ದಿವಸಗಳಲ್ಲಿ ಅದನ್ನು ಈ ಸಭೆಯ ಮುಂದೆ ಮಂಡಿಸಬೇಕೆಂದು ಉದ್ದೇಶವಿದೆ ಎಂಬುದನ್ನು ದಯವಿಟ್ಟು ತಿಳಿಸಬೇಕು. ಮತ್ತು ಆಂಧ್ರ ಶಾಸನ ಸಭೆಯಲ್ಲಿ ಆಂಧ್ರದ ಮುಖ್ಯ ಮಂತ್ರಿಗಳು ಶ್ರದ್ಧೆ ವಹಿಸಿ ಈ ಭಾಷಾ ಸಮಸ್ಯೆಯ ವಿಚಾರದಲ್ಲಿ ಒಂದು ನಿರ್ಣಯವನ್ನು ಮಂಡಿಸಿ ಅದನ್ನು ಅಲ್ಲಿ ಉಭಯ ಸದನಗಳೂ ಒಪ್ಪಿಕೊಂಡಿವೆ. ಅದನ್ನು ಅನುಸರಿಸಿ ಇಲ್ಲಿಯೂ ಪ್ರೈಸೂರು ಸರ್ಕಾರದವರು ಭಾಷಾ ಸಮಸ್ಯೆಯ ಬಗ್ಗೆ ಒಂದು ಕ್ರಮವನ್ನು ಅನುಸರಿಸುತ್ತೀರಾ ?

ಶ್ರೀ ಕೆ. ವಿ. ಶಂಕರಗೌಡ (ವಿದ್ಯಾಶಾಖೆಯ ಮಂತ್ರಿಗಳು).—ಈಗ ಅಂಥಾದ್ದು ಒಂದು ನಿರ್ಣಯವನ್ನು ಸಭೆಯ ಮುಂದೆ ತರಬೇಕು ಎನ್ನುವ ವಿಷಯ ಪರಿಶೀಲನೆಯಾಗುತ್ತಿದೆ. ಅದಕ್ಕಾಗಿ ಸರ್ಕಾರದ ಪರವಾಗಿ ಒಂದು ನಿರ್ಣಯವನ್ನು ತರುವುದಕ್ಕೆ ಕಾಲಾವಕಾಶವಿಲ್ಲ. ಆದ್ದರಿಂದ ಒಂದು ನಾನ್ ಆಫಿಷಿಯಲ್ ರೆಸಲ್ಯೂಷನ್ ತರುವುದಕ್ಕೆ ಅವಕಾಶವಿದೆಯೇ ಎಂಬುದನ್ನು ಪರಿಶೀಲನೆ ಮಾಡಿ ಯಾವುದಾದರೂ ರೂಪದಲ್ಲಿ ಒಂದು ನಿರ್ಣಯ ಈ ಸಭೆಯ ಮುಂದೆ ಬರುತ್ತದೆಂದು ನನಗೆ ಅನಿಸುತ್ತದೆ.

ಶ್ರೀ ವೈ. ಎಸ್. ಪಾಟೀಲ್.—ಕಪ್ ಅವಾರ್ಡನ್ನು ಒಪ್ಪಿಕೊಳ್ಳಬಾರದು ಎನ್ನುವ ಬಗ್ಗೆ ಈ ಸಭೆಯಲ್ಲಿ ಒಂದು ನಿರ್ಣಯವನ್ನು ತರಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

Mr. DEPUTY CHAIRMAN.—It will not come within the competence of this House.